ನಾನು ಹಾಗೆ ಮಾಡದೆ ಸುಮ್ಮನಿದ್ದೆ. ಆದರೆ ಒಂದುದಿನ ಒಮ್ಮಿಂದೊಮ್ಮೆಲೆ ಅಂಥ ಒಂದು ಮೋಜಿನ ಉಪಾಯ ನನ್ನ ತಲೆ ಹೊಕ್ಕಿತು. ಅದನ್ನು ಕಾರ್ಯಗತಗೊಳಿಸಲೇಬೇಕೆಂಬ ಪ್ರಲೋಭನೆಯನ್ನು ನನ್ನಿಂದ ತಡೆದುಕೊಳ್ಳಲಾಗಲಿಲ್ಲ.

ನಾನು ಈಗಾಗಲೇ ತಿಳಿಸಿದಂತೆ, ಕೈಲಾಸ ಬಾಬುವಿನ ಅನೇಕ ಗೆಳೆಯರು ಆತನ ಒಣ ಜಂಭದ ಆಡಂಬರವನ್ನು ಬಾಯ್ತುಂಬ ಹೊಗಳಿ ಮುಖಸ್ತುತಿ ಮಾಡುತ್ತಿದ್ದರು. ಒಮ್ಮೆ ನಿವೃತ್ತ ಸರಕಾರಿ ನೌಕರನೊಬ್ಬ ಆತನಿಗೆ ಹೇಳಿದ್ದ. ಛೋಟಾ ಲಾರ್ಡ್ ಸಾಹೇಬರನ್ನು ತಾನು ಭೆಟ್ಟಿಯಾದಾಗ, ಅವರು ಯಾವಾಗಲೂ ನಯಾಂಜೋರದ ಬಾಬೂಗಳ ಬಗ್ಗೆಯೇ ವಿಚಾರಿಸುತ್ತಾರೆ. ಇಡೀ ಬಂಗಾಲದಲ್ಲಿ ಗೌರವಾನ್ವಿತ ಮನೆತನಗಳೆಂದರೆ ಎರಡೇ ಎರಡು, ಒಂದು ಬುರುದ್ವಾನದ ಮಹಾರಾಜ, ಇನ್ನೊಂದು ನಯಾಂಜೋರದ ಬಾಬೂಗಳ ಮನೆತನ. ಹೀಗೆ ಇಂಥ ಭಾರೀ ಸುಳ್ಳನ್ನು ಆತ ಕೈಲಾಸಬಾಬುವಿಗೆ ಹೇಳಿದಾಗ ಆತ ಕೃತಾರ್ಥನಾಗಿ ಹೋಗಿದ್ದ. ಅಲ್ಲದೆ ಆ ಸಂಗತಿಯನ್ನು ಆತ ಎಲ್ಲರ ಮುಂದೆ ಪದೇ ಪದೇ ಹೇಳುತ್ತಿದ್ದ. ತದನಂತರ ಆ ಸರಕಾರಿ ನೌಕರ ತನ್ನ ಗೆಳೆಯರ ಜೊತೆಗೂಡಿ ಬಂದು ಆತನನ್ನು ಮತ್ತೆ ಭೆಟ್ಟಿಯಾದಾಗ ಆತ ಅದೇ ರೀತಿಯಿಂದ ಹಲವಾರು ಪ್ರಶ್ನೆ ಕೇಳಿದ್ದ.

“ಓ, ಇವರೆ, ಅಂದಹಾಗೆ ಛೋಟಾ ಲಾರ್ಡ್ ಸಾಹೇಬ ಹೇಗಿದ್ದಾರೆ? ಚೆನ್ನಾಗಿದ್ದಾರೆಂದಿರಾ? ಅಬ್ಬಾ, ಕೇಳಿ ಸಂತೋಷವಾಯಿತು. ಮತ್ತೆ ಮೇಮ್ ಸಾಹೇಬ ಹೇಗಿದ್ದಾರೆ? ಅವರೂ ಚೆನ್ನಾಗಿದ್ದಾರಲ್ಲವೆ? ಅಬ್ಬಾ, ಅದು ತುಂಬ ಒಳ್ಳೆಯ ಸುದ್ದಿ! ನೀವು ಅವರನ್ನು ಭೇಟಿಯಾದರೆ, ನನ್ನ ಶುಭಾಶಯ ತಿಳಿಸಲು ಮರೆಯದಿರಿ.”

ಕೈಲಾಸ ಬಾಬು ಒಂದಿಲ್ಲೊಂದು ದಿನ ಛೋಟಾ ಲಾರ್ಡ್ ಸಾಹೇಬರನ್ನು ಭೇಟಿಯಾಗುವ ಇಂಗಿತವನ್ನು ಒಂದೇ ಸಮನೆ ವ್ಯಕ್ತಪಡಿಸುತ್ತಿದ್ದ.

ಒಂದು ದಿನ, ನಾನು ಕೈಲಾಸ ಬಾಬುನನ್ನು ಬದಿಗೆ ಕರೆದೊಯ್ದು ಪಿಸುದನಿಯಲ್ಲಿ ಹೇಳಿದೆ, “ಠಾಕೂರ ದಾದಾ, ನಾನು ನಿನ್ನೆ ಬೆಳಗಿನ ದರ್ಬಾರದಲ್ಲಿ ಹಾಜರಿದ್ದೆ. ಅಲ್ಲಿ ಛೋಟಾ ಲಾರ್ಡ್ ಸಾಹೇಬರು ನಯಾಂಜೋರದ ವಂಶಜರ ಬಗ್ಗೆ ಕೇಳಿದರು. ನಾನು, ಕೈಲಾಸ ಬಾಬು ಕಲ್ಕತ್ತಾ ನಗರಕ್ಕೆ ಬಂದಿದ್ದಾರೆ ಎಂದು ಹೇಳಿದೆ. ಅದನ್ನು ಕೇಳಿ, ಇಲ್ಲಿದ್ದೂ ಅವರು ನಮ್ಮನ್ನು ಒಂದೂ ಸಲ ಕರೆದಿಲ್ಲವಲ್ಲ ಎಂದು ತುಂಬಾ ನೊಂದುಕೊಂಡರು. ಎಲ್ಲಾ ಶಿಷ್ಟಾಚಾರ ಬದಿಗಿರಿಸಿ ತಾವೇ ಈ ಮಧ್ಯಾಹ್ನ ನಿಮ್ಮನ್ನು ಖಾಸಗಿಯಾಗಿ ಭೇಟಿ ಮಾಡುತ್ತೇವೆ ಎಂದು ಹೇಳಿದರು.”

ಯಾರೇ ಆಗಿರಲಿ, ಒಂದೇ ಒಂದು ಕ್ಷಣದಲ್ಲಿ ನನ್ನ ಈ ಪಿತೂರಿಯ ಮರ್ಮವನ್ನು ಅರಿಯಬಹುದಿತ್ತು. ಇದೇ ಪಿತೂರಿಯನ್ನು ಬೇರೆಯವರ ಮೇಲೆ ಪ್ರಯೋಗಿಸಿದ್ದರೆ, ಕೈಲಾಸಬಾಬು ಅದನ್ನು ಜೋಕ್ ಎಂದು ತಿಳಿಯುತ್ತಿದ್ದರು. ಆದರೆ ಈ ಸುದ್ದಿಯನ್ನು ಸರಕಾರಿ ನೌಕರನಾದ ನನ್ನಿಂದ ಆತ ಕೇಳಿದ್ದ. ಉಪರಾಜ್ಯಪಾಲರೊಬ್ಬರು ತನ್ನ ಭೇಟಿಗೆ ಬರುವ ಆ ದೊಡ್ಡ ಸುದ್ದಿ ಆತನಿಗೆ ಉತ್ಪ್ರೇಕ್ಷೆಯಾಗಿ ತೋರದೆ ಸಹಜವೂ ನಿಜವೂ ಎನಿಸಿತ್ತು. ನಾನು ಅರುಹಿದ ಆ ಸುದ್ದಿಯಿಂದ ಆತ ತುಂಬ ವಿಚಲಿತನಾಗಿದ್ದ ಹಾಗೂ ಉತ್ತೇಜಿತನಾಗಿದ್ದ. ಆ ಭೇಟಿಯ ಪ್ರತಿಯೊಂದು ವಿವರವು ಆತನನ್ನು ಕುಣಿದಾಡಿಸಿ ಬಿಟ್ಟಿತ್ತು. ಎಲ್ಲಕ್ಕೂ ಮಿಗಿಲಾಗಿ ಆತನಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಆ ಸಮಸ್ಯೆಯನ್ನು ಹೇಗೆ ಪರಿಹರಿಸುವುದು? ಅದೇನು ಅಂಥ ಸಮಸ್ಯೆಯಲ್ಲ ಎಂದು ನಾನು ಆತನಿಗೆ ಹೇಳಿದೆ. ಅಲ್ಲದೆ, ಇಂಗ್ಲಿಷ್ ಬಾರದೇ ಇರುವುದು ಕೂಡ ಒಂದು ರೀತಿಯ ಪ್ರತಿಷ್ಠೆಯ ಸಂಗತಿಯೇ ಆಗಿತ್ತು. ಅಲ್ಲದೆ, ಉಪರಾಜ್ಯಪಾಲರು ಯಾವಾಗಲೂ ತಮ್ಮ ಜೊತೆ ಭಾಷಾಂತರಕಾರರನ್ನು ಕರೆತರುತ್ತಾರೆ. ತಮ್ಮದು ತೀರ ಖಾಸಗಿ ಭೇಟಿ ಎಂದು ಅವರು ಒತ್ತಿ ಹೇಳಿದ್ದಾರೆ.

ಮಧ್ಯಾಹ್ನದ ಹೊತ್ತಿಗೆ, ನೆರೆಹೊರೆಯವರು ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದಾಗ,